ಥ್ಯಾಂಕ್ಯೂ ಟೀಚರ್

# ಮಹದೇವನ ಅಂತಃಕರಣ

■ **ಮಹದೇಶ್ವರಸ್ವಾಮಿ ಬಿ.**
ಮುಖ್ಯ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹೊಂಗಹಳ್ಳಿ, ಗುಂಡ್ಲುಪೇಟೆ, ಚಾಮರಾಜನಗರ



ಮಕ್ಕಳ ಜೊತೆಗೆ ಮಹದೇಶ್ವರಸ್ವಾಮಿ

**ಕೊರೊನಾ** ಲಾಕ್ ಡೌನ್ ಸಮಯದಲ್ಲಿ ದೀರ್ಘ ಕಾಲ ಶಾಲೆಗೆ ರಜೆ ಘೋಷಣೆ ಮಾಡಲಾಗಿತ್ತು. ಇಂತಹ ಸಂಕಷ್ಟ ಕಾಲದಲ್ಲಿ ಶಾಲಾ ಆಸ್ತಿ ಹಾಗೂ ಶಾಲೆಯಲ್ಲಿರುವ ಮರ ಗಿಡ ಪಕ್ಷಿ ಸಂಕುಲವನ್ನು ಕಾಪಾಡುವ ಸಂಕಲ್ಪ ಮಾಡಿದೆ. ಆಗ ನನ್ನ ಜೊತೆ ಕೆಲವು ವಿದ್ಯಾರ್ಥಿಗಳು ಸ್ವಪ್ರೇರಣೆಯಿಂದ ಕೈ ಜೋಡಿಸಲು ಮುಂದಾದರು. ಪ್ರತಿ ನಿತ್ಯ ನನ್ನೊಂದಿಗೆ ಮರಗಿಡಗಳನ್ನು ನೀರು ಹಾಕಿ ಪೋಷಿಸುವ ಜೊತೆಗೆ ಪಕ್ಷಿ ಸಂಕುಲಕ್ಕೆ ಜರಡಿಯಲ್ಲಿ ಕಾಳು, ಮಣ್ಣಿನ ಮಡಿಕೆಯಲ್ಲಿ ನೀರು ಹಾಕಿ ಸಂರಕ್ಷಣೆ ಮಾಡಲಾಗುತ್ತಿತ್ತು. ಆ ಸಂದರ್ಭದಲ್ಲಿ 6 ನೇ ತರಗತಿಯ ಮಹದೇವಸ್ವಾಮಿ ಕೆ.ಜಿ. ಎಂಬ ವಿದ್ಯಾರ್ಥಿ ಒಂದು ದಿನವೂ ಶಾಲೆಯನ್ನು ಬಿಡದೆ, ಶಾಲಾ ಆಸ್ತಿಯನ್ನು ಹಾಗೂ ಪರಿಸರವನ್ನು ಜತನ ಮಾಡುವ ಕೆಲಸದಲ್ಲಿ ತೊಡಗಿಕೊಂಡಿದ್ದನ್ನು ನಾನು ಎಂದಿಗೂ ಮರೆಯಲಾರೆ.

ಮಹದೇವಸ್ವಾಮಿ ಬಡ ಕುಟುಂಬದ ವಿದ್ಯಾರ್ಥಿ. ಅವನಿಗೆ ವಿದ್ಯಾಭ್ಯಾಸಕ್ಕೆ ಬೇಕಾದ ನೆರವನ್ನು ಶಾಲೆಯ ವತಿಯಿಂದ ಮಾಡಲಾಗುತ್ತಿದೆ. ಈ ವಿದ್ಯಾರ್ಥಿ ಕೊರೊನಾ ಲಾಕ್‌ಡೌನ್ ಸಂದರ್ಭದಲ್ಲಿ ತಮ್ಮ ಮನೆಯ ಎತ್ತಿನ ಗಾಡಿಯನ್ನು ಕಟ್ಟಿಸಿ, ಬಿಸಿಯೂಟದ ಆಹಾರ ಪದಾರ್ಥಗಳನ್ನು ತುಂಬಿಕೊಂಡು ಮಕ್ಕಳ ಮನೆ ಮನೆಗೆ ತಲುಪಿಸುವ ಮಹತ್ತರ ಪಾತ್ರವಹಿಸಿದ್ದನು. ಈಗಲೂ ಪ್ರತಿನಿತ್ಯ ನನ್ನ ಜೊತೆಗೆ ಬೆಳಿಗ್ಗೆ 8 ಗಂಟೆಗೆ ಹಾಜರಾಗಿ ಇಡೀ ಶಾಲಾ ಸ್ವಚ್ಛತೆಯಿಂದ ಹಿಡಿದು ಪಕ್ಷಿ ಸಂಕುಲಕ್ಕೆ ಕಾಳು–ನೀರು ಉಣ ಬಡಿಸುತ್ತಾನೆ. ಮರ ಗಿಡ ಬಳ್ಳಿಗಳನ್ನು ಜೀವಕ್ಕಿಂತ ಹೆಚ್ಚಾಗಿ ಪಾಲನೆ ಪೋಷಣೆ ಮಾಡುತ್ತಾನೆ. ನನ್ನ 34 ವರ್ಷ ಶಿಕ್ಷಕ ವೃತ್ತಿ ಜೀವನದಲ್ಲಿ ಮಹದೇವಸ್ವಾಮಿ ಮರೆಯಲಾಗದ ಮಾಣಿಕ್ಯ. ■

# ವಿದ್ಯಾರ್ಥಿಗಳೇ ಜೀವಂತ ಪ್ರಯೋಗಶಾಲೆ

■ **ರಮೇಶ್ ಹಿರೇಜಂಬೂರು**
ವಿಜ್ಞಾನ ಶಿಕ್ಷಕ, ಸರ್ಕಾರಿ ಪ್ರೌಢ ಶಾಲೆ ಚಿಟ್ಟೂರು, ಸೊರಬ, ಶಿವಮೊಗ್ಗ



ವಿಜ್ಞಾನ ಶಿಕ್ಷಕರ ಚರಿತ್ರೆಯ ಪ್ರಾಯೋಗಿಕ ಪಾಠ



ನನ್ನ ವೃತ್ತಿ ಬದುಕಿನ ಸಾರ್ಥಕ ಕ್ಷಣ ಎನ್ನುವುದು ಒಂದು ಭಾವುಕ ಗಳಿಗೆ ಕೂಡ ಹೌದು. ಆ ಒಂದು ದಿನ ನಾನು ಹತ್ತನೇ ತರಗತಿಗೆ ಪಾಠ ಮಾಡುತ್ತಿದ್ದೆ. ಪರಶುರಾಮಣ್ಣ ಬಂದು 'ಸರ್, ಯಾರೋ ಬಂದಿದ್ದಾರೆ ಬರಬೇಕಂತೆ' ಅಂದರು. ಮಕ್ಕಳಿಗೆ ಹೇಳಬೇಕಾಗಿದ್ದ ಪರಿಕಲ್ಪನೆ ಪೂರ್ಣಗೊಳಿಸೋಣ ಎಂದು ಪಾಠ ಮುಂದುವರಿಸಿದೆ. ಅಷ್ಟರಲ್ಲಿ ಮತ್ತೆ ಬಂದ ಅವರು, 'ಸರ್ ನಿಮ್ಮ ಪೀರಿಯಡ್ ಮುಗಿಸಿ ಬರಬೇಕಂತೆ' ಅಂದರು.

ಬಂದವರು ಯಾರು ಎನ್ನುವ ಕುತೂಹಲದ ನಡುವೆ ಪಾಠ ಮುಗಿಸಿ ಆಫೀಸ್ ರೂಮ್‌ಗೆ ಬಂದೆ. ಅಲ್ಲಿ ಕಾದಿದ್ದವರು, ಹತ್ತು ವರ್ಷದ ಹಿಂದೆ ನನ್ನ ವಿದ್ಯಾರ್ಥಿಯಾಗಿದ್ದ ಗಣೇಶ ಮತ್ತು ಅವನ ತಂದೆ. ಸುಮಾರು ವರ್ಷಗಳಿಂದ ಅವನನ್ನು ನೇರವಾಗಿ ನೋಡಲು ಸಾಧ್ಯವಾಗಿರಲಿಲ್ಲ. ಈಗ ದೈಹಿಕವಾಗಿ ಬಲವಾಗಿದ್ದರೂ ಮುಖದಲ್ಲಿ ಅದೇ ಮುಗ್ಧತೆ ಕಾಣುತ್ತಿತ್ತು. ಕುಶಲೋಪರಿ ವಿಚಾರಿಸಿ ಬಂದ ವಿಷಯ ತಿಳಿದಾಗ ಮನಕ್ಕಾದ ಆನಂದ ಅಷ್ಟಿಷ್ಟಲ್ಲ.

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಆತ ತಾಲ್ಲೂಕು ಕೃಷಿ ಅಧಿಕಾರಿಯಾಗಿ ಆಯ್ಕೆಯಾಗಿದ್ದ. 'ಕಷ್ಟವಿದ್ದರೂ ನನ್ನ ಮಗ ಓದಿ ದಡ ಸೇರಿದ. ಅದಕ್ಕೆ ನಮ್ಮ ಮನೆ ದೇವರಿಗೆ ಹೋಗಿ ಪೂಜಿಸಬೇಕಿತ್ತು. ಅದಕ್ಕೂ ಮುಂಚೆ ಗುರುದೇವರ ಆಶೀರ್ವಾದ ಪಡೆಯಲು ಇಲ್ಲಿಗೆ ಬಂದೆವು' ಎಂದು ಗಣೇಶನ ತಂದೆ ನುಡಿದಾಗ ಪ್ರಶ್ನೆ ಮತ್ತು ಪ್ರಯೋಗದ ಮೇಲೆ ಸತ್ಯವನ್ನು ತಿಳಿಯಬೇಕು ಎನ್ನುವ ನನ್ನ ಕಣ್ಣಲ್ಲೂ ನೀರಾಡಿತು. ಜೀವನದ ಸಾರ್ಥಕ ಭಾವ ನವಿರಾಡಿತು. ಅಂದು ನನ್ನನ್ನು ಮುಖ್ಯ ಶಿಕ್ಷಕರು ಧನ್ಯತಾ ಭಾವದಿಂದ ಅಭಿನಂದಿಸಿದರು. ನಮ್ಮ ಮಕ್ಕಳಿಗೆ ಗಣೇಶನ ಮಾತುಗಳು ಪ್ರೇರಣೆಯಾಗಬೇಕು ಎಂದು ತರಗತಿಗೆ ಕರೆದೊಯ್ದು ಅವನಿಗೆ ನಾಲ್ಕು ಮಾತನಾಡಲು ಅವಕಾಶವನ್ನು ಮುಖ್ಯಶಿಕ್ಷಕರು ಮಾಡಿಕೊಟ್ಟರು.

ನನ್ನ ವಿದ್ಯಾರ್ಥಿ ಆಗಿದ್ದಾಗ ಗಣೇಶ ಅಪ್ಪಟ ಗ್ರಾಮೀಣ ಪ್ರತಿಭೆ ಎಂದೇ ಗೋಚರಿಸಿದ. ಹತ್ತನೇ ತರಗತಿಯಲ್ಲಿ ಶಾಲೆಗೆ ಮೊದಲಿಗನಾಗಿ ಪಾಸಾಗಿದ್ದ. ಆತನಿಗೆ ಉತ್ತಮ ಶಿಕ್ಷಣ ಒದಗಿಸಿದರೆ ಏನಾದರೂ ಸಾಧಿಸಬಲ್ಲ ಎಂದು ಶಿವಮೊಗ್ಗದ ಪ್ರತಿಷ್ಠಿತ ಕಾಲೇಜಿಗೆ ಪ್ರವೇಶ ಮಾಡಿಸಿದೆವು. ರಾಜಪ್ಪ ಸರ್ ಸಹಾಯದಿಂದ ಹಾಸ್ಟೆಲ್ ವ್ಯವಸ್ಥೆ ಮಾಡಿಸಿದೆವು. ಅದನ್ನು ಸದುಪಯೋಗ ಮಾಡಿಕೊಂಡ ಗಣೇಶ, ಪಿಯುಸಿ ಸೈನ್ಸ್ ನಂತರ ಕೃಷಿ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದ. ಈಗ ಆತ ಹೊಸನಗರ ತಾಲ್ಲೂಕು ಕೃಷಿ ಅಧಿಕಾರಿಯಾಗಿದ್ದಾನೆ.

ಮಕ್ಕಳ ಸಂಪರ್ಕದಲ್ಲಿದ್ದು ಸೂಕ್ತ ಮಾರ್ಗದರ್ಶನ ನೀಡಿದರೆ ಅವರು ಏನನ್ನಾದರೂ ಸಾಧಿಸುತ್ತಾರೆ ಎನ್ನಲು ಗಣೇಶ ಉತ್ತಮ ಉದಾಹರಣೆ. ಆತನೊಂದಿಗಿನ ಈ ಹದಿನಾಲ್ಕು ವರುಷಗಳ ಸಾಂಗತ್ಯ ನನಗೊಂದು ಯಶಸ್ವೀ ಪ್ರಯೋಗಶಾಲೆಯಾಯಿತು. ■